ಪೂರ್ವದ ಸಮುದ್ರ ತೀರದಲ್ಲಿ ತನ್ನ ನೆರಳು ಹಾಸುತ್ತಿದ್ದಾನೆ. ಅನುಮಾನಿಸುತ್ತಲೇ ಕತ್ತಲೊಂದು ಬೆಳಕನ್ನು ಹೀರಿಕೊಳ್ಳುತ್ತಿದೆ. ಕಪ್ಪು ತನ್ನ ಸಾಮ್ರಾಜ್ಯಕ್ಕೆ ಮರಳುತ್ತಿದೆ.

ಅನ್ಯಮನಸ್ಕನಾದ ಹುಡುಗ ಇನ್ನೂ ಅನ್ಯಮನಸ್ಕನಾಗಿದ್ದಾನೆ; ಚಿಂತಾಕ್ರಾಂತಳಾದ ಹುಡುಗಿ ಇನ್ನೂ ಚಿಂತಾಕ್ರಾಂತಳಾಗಿದ್ದಾಳೆ; ಅಯ್ಯಂಗಾರ್ ಹುಡುಗಿ ಮಧ್ಯರಾತ್ರಿ ಅಮೆರಿಕಾಕ್ಕೆ ಹಾರಲು ಸರ್ವ ಸಿದ್ಧತೆಯೊಂದಿಗೆ ಕಾಯುತ್ತಿದ್ದಾಳೆ; ಎನ್.ಆರ್.ಐ. ತನ್ನ ಮಗನಿಗಿನ್ನೂ ಚಿನ್ನದ ಪುತ್ಥಳಿಯ ತಲಾಶಿನಲ್ಲಿದ್ದಾನೆ; ಎಳೇ ಅಧ್ಯಾಪಕ ಇನ್ನೇನು ದೇವದಾಸನೇ ಆದ ಅನ್ನುವಷ್ಟರಲ್ಲಿ ಅದೇ ಕಾರಿಡಾರಿನಲ್ಲಿ ಮತ್ತೊಂದು ಹುಡುಗಿ ಮಾತಿಲ್ಲದೇ ಮೌನವಾಗಿ ಅವನ ಹೃದಯದಲ್ಲಿ ತಾಂಡವ ನೃತ್ಯವಾಡುತ್ತಿದ್ದಾಳೆ; ವಿಧವೆ – ಇಂತಹ ವಿಷಯದಲ್ಲಿ ಸುಳ್ಳು ಹೇಳುವಂತಿಲ್ಲ. ನಮ್ಮ ದೇಶದಲ್ಲಿ ಒಮ್ಮೆ ವಿಧವೆಯಾದರೆ ಯಾವಾಗಲೂ ವಿಧವೆಯೇ; ಹೃತಿಕ್ ರೋಷನ್ ಜೂನಿಯರ್‌ಗೆ ತಮಿಳು ಸಿನಿಮಾ ಇಂಡಸ್ಟ್ರಿಯಿಂದ ಆಫರ್ ಬಂದಿದೆಯೆಂದು ಸುದ್ದಿ; ಕುದ್ದು, ಕುದ್ದು, ಇನ್ನೇನು ಸಿಡಿಯಲಿರುವ ಸೋದರ ಮಾವನ ಮಗನನ್ನು ಸದ್ಯ, ಏಸೀ ರೂಮಿನಲ್ಲಿ ಕೂರಿಸಿ, ಥಂಡಾ ಬೀರ್ ಕೊಟ್ಟು, ಅತ್ಯಂತ ಸುಂದರ ಹುಡುಗಿಯೊಬ್ಬಳ ಫೋಟೊ ಒಂದನ್ನು ಅವನಪ್ಪ ಹಿಡಿದು ನಿಂತಿದ್ದಾನೆಂಬ ವಾರ್ತೆ ಬೆಳಿಗ್ಗೆಯೇ ಲೋಕಲ್ ಚಾನಲ್ ಬಿತ್ತರಿಸಿಯಾಗಿದೆ.

ಸದ್ಯ, ಯಾರೂ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲವೆಂಬ ಸಮಾಧಾನ.

'ಏನಂಗಾ!...' ವೃದ್ಧ ಮಹಿಳೆ ಗಂಡನನ್ನು ಒಂದು ಮೋಟು ಗೋಡೆಯಾಚೆಯಿರುವ ಪಕ್ಕದ ಮನೆ ಕಿಟಕಿಯತ್ತ ಕರೆಯುತ್ತಿದ್ದಾಳೆ. ಅಮೆರಿಕಾದಲ್ಲಿ ಓದುತ್ತಿರುವ ಪಕ್ಕದ ಮನೆ ಹುಡುಗ ಇದೀಗ ತಾನೇ ಬೀಚಿಗೆ ಹೋಗುವುದಕ್ಕೆ ಮುಂಚೆ, ತಾನು ಮೆಚ್ಚಿದ ಹುಡುಗಿಯೊಬ್ಬಳ ಫೋಟೊ ಒಂದನ್ನು ತನ್ನ ಕಂಪ್ಯೂಟರ್‌ನಲ್ಲಿ ಹೆತ್ತವರಿಗೆ ತೋರಿಸುತಿದ್ದಾನೆ. ಪಕ್ಕದ ಮನೆ ಹುಡುಗನ ಲ್ಯಾಪ್‌ಟ್ಯಾಪಿನಲ್ಲಿ ಆಕಸ್ಮಿಕವಾಗಿ ತಮ್ಮ ಮಗಳ ಫೋಟೊ ಕಂಡು ಹಿರಿಹಿರಿ ಹಿಗ್ಗಿದ ಹಿರಿ ದಂಪತಿ, ಸಂತೋಷದಿಂದ ಮನೆಗೆ ಬಂದವರೇ ಕದವಿಕ್ಕಿ ಹತ್ತೊಂಬತ್ತು ವರುಷ, ಹನ್ನೊಂದು ತಿಂಗಳು, ಮೂರು ವಾರ, ಆರು ದಿನದ ನಂತರ ಮುರುಟಿದ ತಮ್ಮ ತುಟಿ ಸವರುತ್ತಾ, ಬಾಯಿ ಸಿಹಿ ಮಾಡಿಕೊಳ್ಳುತ್ತಿದ್ದಾರೆ.

## ಜಯಶ್ರೀ ಕಾಸರವಳ್ಳಿ

ಸೂಕ್ಷ್ಮಸಂವೇದನೆಯ ಕನ್ನಡ ಕತೆಗಾರ್ತಿ ಜಯಶ್ರೀ ಅವರ ಕಥಾಸಂಗ್ರಹಗಳು: 'ತಂತಿ ಬೇಲಿಯ ಒಂಟಿ ಕಾಗೆ', 'ದಿನಚರಿಯ ಕಡೇ ಪುಟದಿಂದ...' ಲ್ಯಾಟಿನ್ ಅಮೆರಿಕದ ಬರಹಗಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಕತೆಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.